**ಓ ಎಸ್ ನಂ. 101/2023 ಡಿಡಬ್ಲ್ಯೂ 1**

**ಸಾಕ್ಷಿಯನ್ನು ದಿಃ 16.02.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಹೆಚ್ ಎಸ್ ಎಸ್ ವಕೀಲರಿಂದಃ**

ನಾನು ಪಾಂಡವಪುರ ವಲಯ ಅರಣ್ಯಾಧಿಕಾರಿಯಾಗಿ ದಿನಾಂಕ 08.10.2025 ರಂದು ನೇಮಕ ಗೊಂಡಿದ್ದೇನೆ. ನನಗಿಂತ ಮೊದಲು ಆ ಹುದ್ದೆಯಲ್ಲಿ ಜಗದೀಶ್‌ಗೌಡ ಎಂಬುವವರು ಕರ್ತವ್ಯ ನಿರ್ವಹಿಸುತ್ತಿದ್ದರು. ವಾದಿಯನ್ನು ನಾನು ನೋಡಿದ್ದೇನೆ. ವಾದಿಯು ನಮ್ಮ ಇಲಾಖೆಯ ಮೇಲೆ ಏನೆಂದು ದಾವೆ ಹೂಡಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ದಾವಾ ಷೆಡ್ಯೂಲ್ ಸರ್ವೆ ನಂ. 79 ಆಗಿದೆ. ವಾದಿಯು ದಾವೆಯನ್ನು 4 ಎಕರೆ 0.20 ಗುಂಟೆಗಾಗಿ ಹೂಡಿದ್ದಾರೆ. ಸರ್ವೆ ನಂ. 79 ರಲ್ಲಿ ಒಟ್ಟಾರೆಯಾಗಿ ಎಷ್ಟು ಎಕರೆ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ. 79 ರ ಜಮೀನಿಗೆ ನಾನು 5-6 ಬಾರಿ ಭೇಟಿ ನೀಡಿದ್ದೇನೆ.

ಪಾಂಡವಪುರ ತಹಶೀಲ್ದಾರರು ವಾದಿಗೆ ನೀಡಿರುವ ದರಖಾಸ್ತು ದಾಖಲೆಗಳನ್ನು ನೋಡಿದ್ದೇನೆ. ಸರ್ಕಾರವು ಅರ್ಹ ಫಲಾನುಭವಿಗಳಿಗೆ ದರಖಾಸ್ತು ಮೂಲಕ ಜಮೀನನ್ನು ಮಂಜೂರು ಮಾಡಿದೆ ಎಂದರೆ ಇರಬಹುದು. ಹಾಗೆ ಸರ್ವೆ ನಂ. 79 ರಲ್ಲಿ ಜಮೀನು ಮಂಜೂರು ಆದಂತಹ ಅರ್ಹ ಫಲಾನುಭವಿಗಳು ಅದರ ಸ್ವಾಧೀನಾನುಭವವನ್ನು ಹೊಂದಿಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ. ಹಾಗೆ ಮಂಜೂರು ಮಾಡಿದ ಅರ್ಹ ಫಲಾನುಭವಿಗಳಿಗೆ ಸ್ಕೆಚ್, ಗ್ರ್ಯಾಂಟ್ ಸರ್ಟಿಫಿಕೇಟ್, ಮ್ಯುಟೇಷನ್, ಪಹಣಿ ಇತ್ಯಾದಿಗಳನ್ನು ನೀಡಿದ್ದಾರೆ ಎಂದರೆ ಇರಬಹುದು. ಹೀಗೆ ಗ್ರ್ಯಾಂಟ್ ಮಾಡಿಸಿಕೊಂಡ ವಾದಿಯು ದಾವಾ ಆಸ್ತಿಯ ಸ್ವಾಧೀನಾನುಭವವನ್ನು ಹೊಂದಿಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ. ವಾದಿಯು ದಾವಾ ಆಸ್ತಿಯಲ್ಲಿ 1997 ರ ಪೂರ್ವದಿಂದಲೂ ನಿರಂತರವಾಗಿ ಸ್ವಾಧೀನಾನುಭವವನ್ನು

ಹೊಂದಿಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ.

ವಾದಿಯ ಹೆಸರಿಗೆ ನೀಡಿರುವ ಮಂಜೂರಾತಿ ದಾಖಲೆಗಳನ್ನು ಪ್ರಶ್ನೆ ಮಾಡಿ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದೇನೆ. ಅಂತಹ ಮೇಲ್ಮನವಿಯಲ್ಲಿ ವಾದಿಗೆ ಇದುವರೆವಿಗೂ ನೋಟೀಸು ಜಾರಿಯಾಗಿಲ್ಲ ಎಂದರೆ ಸರಿ. ವಾದಿಯ ಸ್ವಾಧೀನಾನುಭವದಲ್ಲಿರುವ ಜಮೀನಿಗೆ ನಮ್ಮ ಇಲಾಖೆಯವರೇ ಸುಖಾಸುಮ್ಮನೆ ತಂಟೆ ತಕರಾರು ತೆಗೆದು ಅವರಿಗೆ ತೊಂದರೆ ಉಂಟು ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ನಾವು ಹಾಗೆ ತೊಂದರೆ ನೀಡಿದ ಕಾರಣದಿಂದ ವಾದಿಯು ನಮ್ಮ ಇಲಾಖೆಗೆ ನೋಟೀಸು ನೀಡಿದ್ದಾರೆ ಎಂದರೆ ನೋಟೀಸು ನೀಡಿದ್ದಾರೆ. ಆ ನೋಟೀಸಿಗೆ ನಾವು ಮರುತ್ತರ ನೀಡಿದ್ದೇವೆ. ಮಂಜೂರು ಮಾಡಿರುವ ಸ್ವತ್ತುಗಳ ಮೇಲೆ ನಮ್ಮ ಇಲಾಖೆಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಅರಣ್ಯ ಇಲಾಖೆಗೆ ಸೇರಿದ ಜಾಗವನ್ನು ತಹಶೀಲ್ದಾರವರು ಮಂಜೂರು ಮಾಡಿರುವ ಕಾರಣ ಆ ಜಾಗದ ಮೇಲೆ ಅರಣ್ಯ ಇಲಾಖೆಗೆ ಹಕ್ಕು ಇದೆ. ಹಾಗೆ 3 ಜನರಿಗೆ ಮಂಜೂರು ಮಾಡಿದೆ. ಅರಣ್ಯ ಇಲಾಖೆಗೆ ಸೇರಿದ ಜಾಗವನ್ನು ತಹಶೀಲ್ದಾರವರು ವಾದಿಗೆ ಮಂಜೂರು ಮಾಡಿದ್ದಾರೆ ಎಂದು ನಮ್ಮ ಪ್ರತಿವಾದ ಪತ್ರದಲ್ಲಿ ಹೇಳಿದ್ದೇವೆ. ಗೋಮಾಳದ ಜಮೀನನ್ನು ಅರ್ಹ ಫಲಾನುಭವಿಗಳಿಗೆ ಮಂಜೂರು ಮಾಡುವಂತಹ ಹಕ್ಕು ಮತ್ತು ಅಧಿಕಾರ ಸಂವಿಧಾನದ ಅನುಸಾರ ಸರ್ಕಾರಕ್ಕೆ ಇದೆ ಎಂದರೆ ಸರಿ. ಮಂಜೂರು ಮಾಡುವ ಮೊದಲು ಗ್ರಾಮ ಲೆಕ್ಕಿಗ, ಕಂದಾಯ ನಿರೀಕ್ಷಕ ಹಾಗೂ ಇತರರು ಸ್ಥಳ ಪರಿಶೀಲನೆ ಮಾಡಿ ಯಾರು ಸ್ವಾಧೀನದಲ್ಲಿ ಇದ್ದಾರೆ ಎಂಬುದನ್ನು ತಿಳಿದುಕೊಂಡು ಆನಂತರ ಮಂಜೂರು ಮಾಡುತ್ತಾರೆ ಎಂದರೆ ಇರಬಹುದು.

ಸರ್ವೆ ನಂ. 79 ನ್ನು ಸರ್ಕಾರವು 2014 ರಲ್ಲಿ deemed forest ಪಟ್ಟಿಯಲ್ಲಿ ಸೇರಿಸಿದ್ದಾರೆ. ಸರ್ವೆ ಇಲಾಖೆಯವರು 2014 ರಲ್ಲಿ ಬಂದು ನಮಗೆ ಸೇರಿದ ಜಾಗವನ್ನು ಮೋಜಣಿ ಸರ್ವೆ ಮಾಡಿ ಗಡಿ ಗುರುತಿಸಿದ್ದಾರೆ. ಮೋಜಣಿ ಮಾಡಿ

ಗಡಿ ಗುರುತಿಸಿದ ಬಗ್ಗೆ ವರದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. Deemed forest ಜಾಗಕ್ಕೆ ಸಂಬಂಧಿಸಿದ ಆರ್ ಟಿ ಸಿ ಯನ್ನು ನಮ್ಮ ಇಲಾಖೆಗೆ ಇನ್ನು ನೀಡಿಲ್ಲ. 2014 ರಲ್ಲಿ ಮೋಜಣಿ ಸರ್ವೆ ಮಾಡಿಲ್ಲ ಎಂದರೆ ಸರಿಯಲ್ಲ. ಯಾವುದೇ ಸ್ಕೆಚ್ ಅಥವಾ ಗಡಿ ಗುರುತುಗಳನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಜಾಗದ ಸ್ವಾಧೀನಾನುಭವವನ್ನು ವಹಿಸಿಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ 14, 15 ರ ಪ್ರಕಾರ ಮೇಲುಕೋಟೆ ಹೋಬಳಿ, ಅನುವಾಳು ಗ್ರಾಮ ಸರ್ವೆ ನಂ. 79 ಕ್ಕೆ ಸಂಬಂಧಿಸಿದ ನೋಟೀಫಿಕೇಷನ್ ನಲ್ಲಿ ವಿಸ್ತೀರ್ಣ ನಮೂದು ಆಗಿರುವುದಿಲ್ಲವೆಂದು ಮತ್ತು ದರಖಾಸ್ತು ಮಂಜೂರಿ ಜಮೀನು ಕಳೆದು ಉಳಿಕೆ 263.32 ಎಕರೆ ಜಮೀನು ಅರಣ್ಯ ಇಲಾಖೆಗೆ ನೀಡಬೇಕಾಗಿರುತ್ತದೆ ಎಂದು ನಮೂದು ಮಾಡಿದ್ದಾರೆ ಎಂದರೆ ಸರಿ. ಈ ಕಾರಣದಿಂದಾಗಿ ವಾದಿಗೆ ಮಂಜೂರಾಗಿರುವ ಜಮೀನಿನ ಮೇಲೆ ನಮ್ಮ ಇಲಾಖೆಗೆ ಯಾವುದೇ ಹಕ್ಕು ಅಥವಾ ಅಧಿಕಾರ ಇಲ್ಲ ಎಂದರೆ ಜಂಟಿ ಮೋಜಣಿಯಾಗುವವರೆಗೆ ನಾವು ಏನನ್ನು ಸಹ ಹೇಳಲು ಆಗುವುದಿಲ್ಲ. 1997 ರ ಪೂರ್ವದಿಂದಲೂ ವಾದಿಯ ಸ್ವಾಧೀನಾನುಭವದಲ್ಲಿರುವ ದಾವಾ ಆಸ್ತಿಯ ಬಗ್ಗೆ ನಾವು ಹೊಂದಿರುವ ತಪ್ಪು ತಿಳುವಳಿಕೆಯ ಆಧಾರದ ಮೇಲೆ ಮತ್ತು ದಾವಾ ಆಸ್ತಿಯನ್ನು ನಾವು ಯಾವುದೇ ಮೋಜಣಿ ಮಾಡಿಸದೆ ವಾದಿಗೆ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ಸಾರ್ವಜನಿಕರಿಗೆ ಮಂಜೂರು ಮಾಡಿರುವ ಜಾಗವನ್ನು ಹೊರತುಪಡಿಸಿ ಇನ್ನುಳಿದ ಯಾವ ಜಾಗವನ್ನು ಅರಣ್ಯ ಭೂಮಿಯಾಗಿ ಗುರುತಿಸಬಹುದು ಆ ಭೂಮಿಯ ಬಗ್ಗೆ ವರದಿ ಸಲ್ಲಿಸುವಂತೆ ಘನ ಸರ್ವೋಚ್ಚ ನ್ಯಾಯಾಲಯ ಎಲ್ಲಾ ರಾಜ್ಯ ಸರ್ಕಾರಗಳಿಗೆ ಸೂಚನೆ ನೀಡಿತ್ತು ಎಂದರೆ ಸರಿಯಲ್ಲ. ಅರಣ್ಯ ಇಲಾಖೆಗೆ ಪಾಂಡವಪುರ ವಲಯದಲ್ಲಿ ಎಷ್ಟು ಭೂಮಿಯನ್ನು Deemed forest ಆಗಿ ಪರಿಗಣಿಸಲು ನೀಡಬೇಕು ಎಂದು ತಾಲ್ಲೋಕು ಮತ್ತು ಜಿಲ್ಲಾ ಸಮಿತಿಯವರು ನೀಡಿರುವ ವರದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

ದಾವೆ ಹೂಡುವ ಪೂರ್ವದಲ್ಲಿಯೂ ಸಹ ವಾದಿಯು ದಾವಾ ಆಸ್ತಿಯಲ್ಲಿ ಉಳುಮೆ ಮಾಡಿದ್ದರು ಎಂದರೆ ಸರಿಯಲ್ಲ. ವಾದಿಯು ಸರ್ವೆ ನಂ. 79 ರಲ್ಲಿ ಉಳುಮೆ ಮಾಡಿಲ್ಲ. ವಾದಿಯು ಅರಣ್ಯ ಇಲಾಖೆಗೆ ಸೇರಿದ ಜಮೀನಿನಲ್ಲಿ ಕಾನೂನು ಬಾಹಿರವಾಗಿ ಪ್ರವೇಶ ಮಾಡಿ ಉಳುಮೆ ಮಾಡಿದ್ದಾರೆ ಎಂದು ಅವರ ವಿರುದ್ಧ ದೂರು ನೀಡಿದ್ದೆವು. ಕಾನೂನು ಪ್ರಕಾರ ವಾದಿಗೆ ಮಂಜೂರಾಗಿರುವ ಜಾಗದಲ್ಲಿ ಆತನು ಉಳುಮೆ ಮಾಡಿದ್ದಾನೆಯೇ ಹೊರತು ಅರಣ್ಯ ಇಲಾಖೆಗೆ ಸೇರಿದ ಜಾಗದಲ್ಲಿ ಕಾನೂನು ಬಾಹಿರವಾಗಿ ಉಳುಮೆ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಯ ವಿರುದ್ಧ ನಮ್ಮ ಇಲಾಖೆಯೇ ಅರಣ್ಯ ಕಾಯ್ದೆ ಯಡಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಸ್ವಯಂ ಪ್ರೇರಿತ ದೂರನ್ನು ದಾಖಲಿಸಿ ನ್ಯಾಯಾಲಯಕ್ಕೆ ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿದೆ. ಹಾಗೆ ದಾಖಲಿಸಿಕೊಂಡು 3 ವರ್ಷಗಳಾಗಿವೆ. ಇನ್ನು ಅಂತಿಮ ವರದಿಯನ್ನು ಸಲ್ಲಿಸಿಲ್ಲ. ವಾದಿಯ ವಿರುದ್ಧ ಎ ಸಿ ಮತ್ತು ಡಿ ಸಿ ರವರಿಗೆ ದೂರು ನೀಡಲಾಗಿದೆ. ಸರ್ವೆ ನಂ. 79 ರಲ್ಲಿ ಅರ್ಹ ಫಲಾನುಭವಿಗಳಿಗೆ ಮಂಜೂರಾಗಿರುವ ಜಾಗವನ್ನು ಹೊರತುಪಡಿಸಿ ಇನ್ನುಳಿದ ಜಾಗವು ಈಗಲೂ ಸಹ ಸರ್ಕಾರದ ವಶದಲ್ಲಿಯೇ ಇದೆ ಮತ್ತು ಅದನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಿಲ್ಲ ಎಂದರೆ ಸರಿ.

**ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**